ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹಾವೇರಿ.
ಜಿಲ್ಲಾ ಸರ್ವೇಕ್ಷಣಾ / ಎನ್.ಸಿ.ಡಿ ಘಟಕ ಹಾವೇರಿ.
'ಎ' ಬ್ಲಾಕ್, 3ನೇ ಮಹಡಿ, ಕೊಠಡಿ ಸಂಖ್ಯೆ: 15, ಜಿಲ್ಲಾಡಳಿತ ಭವನ ದೇವಗಿರಿ, ಹಾವೇರಿ-581110.
Phone No: 08375-232210 E-mail - ncdhaveri@gmail.com

ಸಂಖ್ಯೆ: ಡಿ.ಎಸ್.ಯು/ಡಿ.ಎನ್.ಸಿ/ /2025-26/1569 ದಿನಾಂಕ: 19-07-2025

## " ಪತ್ರಿಕಾ ಪ್ರಕಟಣೆ "

ವಿಷಯ : ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಜಿಲ್ಲೆಯಲ್ಲಿ ಮಂಜೂರಾಗಿ ಖಾಲಿ ಇರುವ ಜಿಲ್ಲಾ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಸಂಯೋಜಕರ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1) ಮಾನ್ಯ ಮುಖ್ಯ ಆಡಳಿತಾಧಿಕಾರಿಗಳು, ರಾಷ್ಟ್ರೀಯ ಆರೋಗ್ಯ ಅಭಿಯಾನ ಬೆಂಗಳೂರ ರವರ ಪತ್ರ ಸಂಖ್ಯೆ : NHM/CPHC-UHC/DHWC/28/2023-24/613877 ದಿನಾಂಕ : 21-06-2025
2) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಹಾವೇರಿ ರವರ ಟಿಪ್ಪಣಿ ಅನುಮೋದನೆ ದಿನಾಂಕ : 03-07-2025

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ಸಿ.ಪಿ.ಹೆಚ್.ಸಿ-ಯು.ಹೆಚ್.ಸಿ ಕಾರ್ಯಕ್ರಮದಡಿ ಜಿಲ್ಲಾ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಸಂಯೋಜಕರ ಹುದ್ದೆ ಖಾಲಿ ಇದ್ದು, ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ಉಲ್ಲೇಖ-01ರಂತೆ ಮಾರ್ಗಸೂಚಿಗಳನ್ನು ನೀಡಿದ್ದು, ಅದರಂತೆ ಈ ಕೆಳಕಂಡ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ಹುದ್ದೆಯ ಹೆಸರು | ವಿದ್ಯಾರ್ಹತೆ | ಹುದ್ದೆ ಸಂಖ್ಯೆ | ಮಾಸಿಕ ಸಂಚಿತ ವೇತನ | ಆನ್‌ಲೈನ ಮೂಲಕ ಅರ್ಜಿ ಸಲ್ಲಿಸುವ ದಿನಾಂಕ & ಆನ್‌ಲೈನ ವೆಬ್ ಸೈಟ್ ವಿಳಾಸ | ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ದಿನಾಂಕ ಮತ್ತು ಸಮಯ |
|---|---|---|---|---|---|---|
| 01 | ಜಿಲ್ಲಾ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಸಂಯೋಜಕ | **BDS with MPH/ MBA or BAMS with MPH/ MBA or BHMS with MPH/ MBA or BUMS with MPH/ MBA or BYNS with MPH/ MBA or M.sc Nursing with MPH/ MBA or M.sc Life science with MPH/ MBA or B.sc Nursing with MPH/ MBA** | 01 | 30000/- | ದಿ:21-07-2025 https://haveri.nic.in | ದಿ:05-08-2025 ರಂದು ಬೆಳಿಗ್ಗೆ 10.00 ರಿಂದ ಸಂಜೆ 05.00 ವರೆಗೆ ಸ್ಥಳ: ಜಿಲ್ಲಾ ಸರ್ವೇಕ್ಷಣಾ ಘಟಕ ಹಾವೇರಿ. ಎ ಬ್ಲಾಕ್, 3ನೇ ಮಹಡಿ, ಕೊಠಡಿ ಸಂಖ್ಯೆ 15, ಜಿಲ್ಲಾ ಆಡಳಿತ ಭವನ ಹಾವೇರಿ |

**ವಿಶೇಷ ಸೂಚನೆ :**

1) ಆನ್‌ಲೈನ್ ಮೂಲಕ ಮಾತ್ರ https://haveri.nic.in ನಲ್ಲಿ ಅರ್ಜಿಯನ್ನು ಸಲ್ಲಿಸುವುದು.
2) ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಪ್ರಾರಂಭ ದಿನಾಂಕ : 21-07-2025 ಮುಕ್ತಾಯ ದಿನಾಂಕ : 31-07-2025
3) ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನಮೂದಿಸಿರುವ ದಾಖಲೆಗಳ ಮೂಲ ಪ್ರತಿಗಳನ್ನು ದಾಖಲಾತಿ ಪರಿಶೀಲನೆ ಸಂದರ್ಭದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು.
4) ಮೂಲ ದಾಖಲೆಗಳನ್ನು ಪರಿಶೀಲಿಸಲು ನಿಗದಿಪಡಿಸಿರುವ ದಿನಾಂಕ:05-08-2025 ರಂದು ಸಂಜೆ : 05.00 ರೊಳಗಾಗಿ ಹಾಜರಾಗುವ ಅಭ್ಯರ್ಥಿಗಳ ದಾಖಲೆಗಳನ್ನು ಮಾತ್ರ ಪರಿಶೀಲಿಸಲಾಗುವುದು.
5) ಮೂಲ ದಾಖಲೆಗಳನ್ನು ಪರಿಶೀಲಿಸುವ ದಿನಾಂಕದ ಬಗ್ಗೆ ಅಭ್ಯರ್ಥಿಗಳಿಗೆ ಪತ್ರಿಕಾ ಪ್ರಕಟಣೆಯಲ್ಲಿ ನಿಗಧಿಪಡಿಸಿದ ದಿನಾಂಕವೇ ಅಂತಿಮವಾಗಿರುತ್ತದೆ.
6) 40 ವರ್ಷ ಮೇಲ್ಪಟ್ಟವರಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
7) ದಾಖಲಾತಿ ಪರಿಶೀಲನೆಯಲ್ಲಿ ಅರ್ಹಗೊಂಡ ಅಭ್ಯರ್ಥಿಗಳನ್ನು ವಿದ್ಯಾರ್ಹತೆಯಲ್ಲಿ ಹೊಂದಿದ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ, ಸದರಿ ಪಟ್ಟಿಯಲ್ಲಿ ಗರಿಷ್ಠ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಹುದ್ದೆಗೆ ಆಯ್ಕೆ ಮಾಡಲಾಗುವುದು.
8) ಹುದ್ದೆಗೆ ಆಯ್ಕೆ ಮಾಡಲಾದ ಅಭ್ಯರ್ಥಿಗಳು ನಿಯೋಜಿಸಿದ ಸ್ಥಳಕ್ಕೆ 07 ದಿನಗಳೊಳಗಾಗಿ ಹಾಜರಾಗದಿದ್ದಲ್ಲಿ ಅರ್ಹತಾ ಪಟ್ಟಿಯಲ್ಲಿನ ನಂತರದ ಅಭ್ಯರ್ಥಿಯನ್ನು ಆಯ್ಕೆಗೆ ಪರಿಗಣಿಸಲಾಗುವುದು.
9) ಆನ್‌ಲೈನ್ ಅರ್ಜಿಯಲ್ಲಿರುವ ಎಲ್ಲಾ ಮಾಹಿತಿಯನ್ನು ಭರ್ತಿ ಮಾಡತಕ್ಕದ್ದು.

10) ಅರ್ಜಿಯೊಂದಿಗೆ ಲಗತ್ತಿಸಬೇಕಾದ (ಅಪ್ ಲೋಡ್ ಮಾಡಬೇಕಾದ) ದಾಖಲೆಗಳು

- ಅಭ್ಯರ್ಥಿಯ ಇತ್ತೀಚಿನ ಭಾವಚಿತ್ರ (In JPG Format)
- ಎಸ್.ಎಸ್.ಎಲ್.ಸಿ ಅಂಕಪಟ್ಟಿ (In PDF File)
- ಶೈಕ್ಷಣಿಕ ವಿದ್ಯಾರ್ಹತೆಯ ಎಲ್ಲಾ ಸೆಮಿಸ್ಟರ/ವರ್ಷಗಳ ಅಂಕಪಟ್ಟಿಗಳ ಪ್ರತಿ (In PDF File)
- MPH/MBA ವಿದ್ಯಾರ್ಹತೆಯ (ಕಡ್ಡಾಯ) ಪ್ರತಿ (In PDF File)

11) ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸರ್ಕಾರದಿಂದ ಯಾವುದೇ ವಿಧವಾದ ಭತ್ಯೆ ನೀಡಲಾಗುವುದಿಲ್ಲ.

12) ಒಂದು ವೇಳೆ ಮೆರಿಟ್ ಆಧಾರದ ಮೇರೆಗೆ ಆಯ್ಕೆಯಾದ ಅಭ್ಯರ್ಥಿ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸಲಾಗುವುದು. ಮೇರಿಟ್ ಆಧಾರದ ಕಾಯ್ದಿರಿಸಿರುವ ಪಟ್ಟಿಯಲ್ಲಿರುವ (Waiting List) ಅಭ್ಯರ್ಥಿಗಳನ್ನು ಖಾಲಿಯಾಗುವ ಈ ಹುದ್ದೆಗಳಿಗೆ ಆಯ್ಕೆಗೆ ಪರಿಗಣಿಸಲಾಗುವುದು.

13) ಸದರಿ ಮೇಲ್ಕಾಣಿಸಿದ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದ ಪೂರ್ಣ ಪ್ರಮಾಣದ ಹಕ್ಕನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಹಾವೇರಿಯು ಕಾಯ್ದಿರಿಸಿಕೊಂಡಿರುತ್ತದೆ. ಹಾಗೂ ಮಾಸಿಕ ಸಂಚಿತ ವೇತನವನ್ನು ರಾಜ್ಯ ಮಟ್ಟದ ಮಾರ್ಗಸೂಚಿ ಪ್ರಕಾರ ನಿಗದಿಪಡಿಸಲಾಗುತ್ತದೆ.

ಸದಸ್ಯ ಕಾರ್ಯದರ್ಶಿಗಳು ಹಾಗೂ<br>
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ<br>
ಅಧಿಕಾರಿಗಳು, ಹಾವೇರಿ.